ಶ್ರೀ ಆರ್. ಶಂಕರಮಾಮಯ್ಯ... ಕಾಂಗ್ರೆಸ್‌ನವರು ಸೃಷ್ಟಿ ಮಾಡುವಂಥ ಸಂಸ್ಕೃತಿ ಕಡಿಮೆ ಯಾಗಲಿಲ್ಲ, ಇನ್ನೂ ಹೆಚ್ಚಾಗಿದೆ. ನಾನು ರೈತರ ಬಗ್ಗೆ ಹೇಳುತ್ತಿದ್ದೆ. ಗ್ರಾಮಾಂತರ ಪ್ರದೇಶದಲ್ಲಿರುವ ೫೦ ಲಕ್ಷ ಜನ ರೈತರಿಗೆ ಸಬ್ಸಿಡೈಸ್ಡ್ ಫುಡ್ ಮತ್ತು ಕ್ಲಾತ್ ಇವರ ಲೆಕ್ಕದ ಪ್ರಕಾರ ಕೊಡಬೇಕಾಗಿತ್ತು. ಈಗ ೩೧ ಲಕ್ಷ ಜನಕ್ಕೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇನ್ನು ೧೯ ಲಕ್ಷ ಜನಕ್ಕೆ ಕೊಟ್ಟಿಲ್ಲ. ಈ ವಿಚಾರದಲ್ಲಿ ಕೂಡ ಸರ್ಕಾರದವರು ಗಂಭೀರವಾಗಿ ಯೋಚನೆ ಮಾಡಿ ಯಾರಿಗೆ ಕೊಟ್ಟಿಲ್ಲವೋ ಅಂಥವರಿಗೂ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ಜಾಸ್ತಿ ಮಾತನಾಡಬೇಕಾಗಿದೆ. ೧೯೮೩ರಲ್ಲಿ ಮಾನ್ಯ ಸಜೀರ್ ಸಾಹೇಬರು ಕಮ್ಯಾಂಡಬಲ್ ಆಗಿ ಕೆಲಸ ಮಾಡಿದರು. ಈಗ ಕೊಳವೆ ಬಾವಿಗಳಿಗೆ ಜೋಡಿಸಿರುವ ಪಂಪುಗಳ ರಿಪೇರಿ ಕೂಡ ಇಲ್ಲದಂತಾಗಿದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಿತಿ ಬಂದಮೇಲೆ ರಿಪೇರಿ ವ್ಯವಸ್ಥೆ ಮಾಡುತ್ತಾರೋ, ಬಿಟ್ಟುಬಿಡುತ್ತಾರೋ ಗೊತ್ತಿಲ್ಲ. ರಾಜ್ಯದಲ್ಲಿರುವ ಎಷ್ಟೋ ಹ್ಯಾಮ್‌ಲೆಟ್‌ಗಳಿಗೆ ಇನ್ನು ಕುಡಿಯುವ ನೀರಿನ್ನು ಒದಗಿಸುವುದಕ್ಕೆ ಆಗಲ್ಲ. ಆರು ತಿಂಗಳ ಮೊದಲು ಕುಡಿಯುವ ನೀರಿನ ಬಗ್ಗೆ ಏನೊಂದು ಆದ್ಯತೆ ಕೊಟ್ಟಿದ್ದರೂ ಅದನ್ನು ಈಗ ಕೊಟ್ಟಿಲ್ಲ. ಇನ್ನು ಹಳ್ಳಿಗಳಿಗೆ ರಸ್ತೆ ನಿರ್ಮಾಣದ ವಿಚಾರದಲ್ಲಿ ಕೂಡ ಸರ್ಕಾರ ಗಮನಕೊಟ್ಟಿಲ್ಲ. ಬೇಸಿಕ್ ಅಮೆನಿಟೀಸ್‌ಗಳೇ ಇಲ್ಲ. ಸ್ಕೂಲು ಕಟ್ಟಡಗಳು ಇಲ್ಲ. ೧೫೦ ಜನ ವಿದ್ಯಾರ್ಥಿಗಳಿಗೆ ಒಬ್ಬರು ಉಪಾಧ್ಯಾಯರು ಇರುತ್ತಾರೆ. ಒಂದು ದಿವಸ ಮೇಸ್ಟ್ರು ಬರದೇ ಇದ್ದರೆ ಮಕ್ಕಳ ಗತಿ ಏನು? ಎನ್.ಆರ್.ಇ.ಪಿ. ಯೋಜನೆಯಲ್ಲಿ ರಸ್ತೆಗಳನ್ನು ಮಾಡಿಸಿದ್ದೇವೆಂದು ಹೇಳುತ್ತಾರೆ. ಅದು ಕಾಣುತ್ತಿಲ್ಲ. ಐ.ಆರ್.ಡಿ.ಪಿ. ಯೋಜನೆಯಲ್ಲಿ ಜಾಸ್ತಿ ಅನುಕೂಲ ಮಾಡಿಕೊಟ್ಟಿದ್ದೇವೆಂದು ಹೇಳುತ್ತಾರೆ. ತಮಗೆ ಗೊತ್ತಿದೆ, ಒಂದು ಹಳ್ಳಿಗೆ ೩೩ ಜನಕ್ಕೆ ಕೊಡುತ್ತಾರೆ, ಯಾವ ಬ್ಯಾಂಕಿಗೆ ಹೋಗಲಿ, ಸರ್ಕಾರದವರು ಹೇಳಿದರೂ ನಾವು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ೧೩ಲಕ್ಷ ಮನೆಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಕಳೆದ ೩೮ ವರ್ಷಗಳಿಂದ ಕೊಟ್ಟಿರುವುದನ್ನು ಹೇಳಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ೩೭೦ ಹಳ್ಳಿಗಳು ಇವೆ. ೧೮೦ ಮನೆಗಳನ್ನು ಕೊಡುತ್ತಾರೆ. ಮನೆಗಳಿಗಾಗಿ ೫,೦೦೦ ಅರ್ಜಿಗಳು ಇವೆ. ಈ ವರ್ಷವನ್ನು ಇಂಟರ್‌ನ್ಯಾಷನಲ್ ಇಯರ್ ಆಫ್ ಹೌಸಿಂಗ್ ಎಂದು ಕರೆದಿದ್ದಾರೆ. ಈ ವರ್ಷ ಜೆಚ್ಚು ಮನೆಗಳನ್ನು ಕೊಡಬೇಕೆಂದು ಹೇಳುತ್ತೇನೆ. ೨೦ ಅಂಶಗಳ ಕಾರ್ಯಕ್ರಮದ ಮೇರೆಗೆ ಸೈಟುಗಳನ್ನು ಕೊಡತಕ್ಕಂಥಾದ್ದು ಇದ್ದು ಅದನ್ನು ಈಗ ಬಿಟ್ಟಿದ್ದಾರೆ. ಲ್ಯಾಂಡ್ ಅಕ್ವಿಜಿಷನ್ ಪ್ರೊವೈಸಲ್ ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಗ್ರಾಮಾಂತರ ಪ್ರದೇಶಗಳ ವಿಚಾರದಲ್ಲಿ ಅನುಕೂಲಕರವಾದಂಥ ಒಂದು ಮಾತು ಕೂಡ ಇಲ್ಲ.

ಅಧ್ಯಕ್ಷರು... ತಮಗೆ ಟೈಮ್ ಆಯಿತು.

ಶ್ರೀ ಆರ್. ಶಂಕರಮಾಮಯ್ಯ... ಆಡಳಿತ ವ್ಯವಸ್ಥೆಯಲ್ಲಿ ಲಂಚದ ಹಾವಳಿ ತುಂಬಾ ಜಾಸ್ತಿಯಾಗಿದೆ. ಇದನ್ನು ತಪ್ಪಿಸುವ ವಿಚಾರದಲ್ಲಿ ಸರ್ಕಾರದವರು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು... ಈಗ ಪ್ರಕಟಣೆ.

---

ಈ ದಿನ ಸಮಾವೇಶಗೊಂಡ ಸದನದ ಕಾರ್ಯಾಂಗಾಲಾಪಗಳ ಸಲಹಾ ಸಮಿತಿಯು ಸದನವನ್ನು ೧೩ನೇ ಫೆಬ್ರುವರಿ, ೧೯೮೨ರಂದು ಮುಂಕ್ರಾವಸ್ಥೆಗೊಳಿಸಿ ಮತ್ತೆ ದಿನಾಂಕ ೨೭ನೇ ಫೆಬ್ರುವರಿ, ೧೯೮೨ರಂದು ಸಭೆ ಸೇರಬೇಕೆಂದು ತೀರ್ಮಾನಿಸಿತು.

೨೭ನೇ ಫೆಬ್ರುವರಿ, ೧೯೮೨ರಿಂದ ಸದನದ ಕಾರ್ಯಕಲಾಪಗಳನ್ನು ಕೆಳಕಂಡಂತೆ ನಡೆಸಬೇಕೆಂದು ತೀರ್ಮಾನಿಸಿತು.

೧೧-೨-೧೯೮೨ ಮತ್ತು ೧೩-೨-೧೯೮೨ : ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಪ್ರಸ್ತಾವದ ಚರ್ಚೆ ಮುಕ್ತಾಯ.

೧೫-೨-೧೯೮೨ (ಬೆಳಿಗ್ಗೆ ಉಪವೇಶನ) : ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ

| | | |
|---|---|---|
| ೨೭-೨-೧೯೮೭ | : | ಮಧ್ಯಾಹ್ನ ೧.೦೦ ಗಂಟೆಗೆ ಬಜೆಟ್ ಮಂಡಿಸುವುದು |
| ೨೮-೨-೧೯೮೭ | : | ಬೆಳಿಗ್ಗೆ ೯.೦೦ ಗಂಟೆಗೆ ಶಾಸನ ರಚನೆ, ವಿಧೇಯಕ ಪನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು<br>(ಅಧ್ಯಾದೇಶದ ಸ್ಥಾನದಲ್ಲಿ ಮಂಡಿಸಿದ ವಿಧೇಯಕ) |
| ೧-೩-೧೯೮೭ | : | ಭಾನುವಾರ ರಜಾ ದಿನ |
| ೨-೩-೧೯೮೭ ರಿಂದ ೫-೩-೧೯೮೭ | : | ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ |
| ೬-೩-೧೯೮೭ | : | ಬೆಳಿಗ್ಗೆ ೯.೦೦ ಗಂಟೆಗೆ ಆಯವ್ಯಯದ ಮೇಲೆ ನಡೆದ ಚರ್ಚೆಗೆ ಉತ್ತರ |

ದಿನಾಂಕ ೬ನೇ ಮಾರ್ಚ್, ೧೯೮೭ರಿಂದ ಸದನವು ಅನುದಾನಗಳ ಮೇಲೆ ಬೇಡಿಕೆಗಳ ಬಗ್ಗೆ ಚರ್ಚೆ ನಡೆಸುವುದು.

ಇಂದಿನ ಸಭೆಯ ಕಾರ್ಯಕಲಾಪಗಳು ಮುಗಿದಿವೆ. ಸಭೆಯು ಈ ದಿವಸಕ್ಕೆ ಮುಗಿದು ನಾಳೆ ಬೆಳಿಗ್ಗೆ ೧೧-೦೦ ಗಂಟೆಗೆ ಸೇರುತ್ತದೆ.

(ಸಭೆಯು ೫ ಗಂಟೆ ೪೮ ನಿಮಿಷಕ್ಕೆ ಮುಂಕ್ಕೂಯಿವಾಗಿ, ಪುನಃ ಬುಧವಾರ, ದಿನಾಂಕ ೧೧ನೇ ಫೆಬ್ರುವರಿ ೧೯೮೭ರ ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.)

ಕಾ. ಸೂ. ೬೧